# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-೧<br>Part- I | ಬೆಂಗಳೂರು,ಬುಧವಾರ, ಜನವರಿ 1, 2020 (ಪುಷ್ಯ 11, ಶಕ ವರ್ಷ 1940)<br>**Bengaluru, Wednesday, January 1, 2020 (Pushya 11, Shaka Varsha 1940)** | ನಂ. ೧<br>No. 1 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ - ಇ-ಗೆಜೆಟ್ ನ್ನು ಪ್ರಾರಂಭಿಸುವ ಕುರಿತು

***

**ಪ್ರಸ್ತಾವನೆ**:-

ಕರ್ನಾಟಕ ರಾಜ್ಯ ಪತ್ರವು 155 ವರ್ಷಗಳ ಇತಿಹಾಸವನ್ನು ಹೊಂದಿದ್ದು, ಮೊದಲ ಬಾರಿಗೆ ರಾಜ್ಯ ಪತ್ರವು 1866ರಲ್ಲಿ ಮೈಸೂರು ರಾಜ್ಯ ಪತ್ರವಾಗಿ ಪ್ರಕಟಿತವಾಯಿತು. ಸ್ವಾತಂತ್ರ್ಯ ನಂತರದಲ್ಲಿ ಮೈಸೂರು ರಾಜ್ಯ ಪತ್ರವೆಂದೂ, ನಂತರ ನವೆಂಬರ್ 1973 ರಿಂದ ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯವೆಂದು ನಾಮಕರಣ ಮಾಡಿದಾಗಿನಿಂದ ಕರ್ನಾಟಕ ರಾಜ್ಯ ಪತ್ರವೆಂದು ನಿಯಮಿತವಾಗಿ ಇಂದಿನವರೆವಿಗೂ ಪ್ರಕಟಿಸಲಾಗುತ್ತಿದೆ.

ಸಚಿವಾಲಯದಲ್ಲಿ ದಿನಾಂಕ 01.05.2019ರಿಂದ ಜಾರಿಗೆ ಬರುವಂತೆ ಇ-ಕಚೇರಿಯನ್ನು ಅನುಷ್ಠಾನಗೊಳಿಸಲಾಗಿದ್ದು, ಸದ್ಯದಲ್ಲಿಯೇ ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರ ಕಚೇರಿ ಹಾಗೂ ಜಿಲ್ಲಾ ಮಟ್ಟದ ಸರ್ಕಾರಿ ಕಚೇರಿಗಳಲ್ಲಿ ಇ-ಕಚೇರಿಯ ತಂತ್ರಾಂಶವನ್ನು ಜಾರಿಗೆ ತರುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ **ಭಾರತ ಸರ್ಕಾರವು ಈಗಾಗಲೇ ಪ್ರಚುರ ಪಡಿಸಲಾಗಿರುವ ಇ-ಗೆಜೆಟ್ ಮಾದರಿಯಲ್ಲಿಯೇ ರಾಜ್ಯ ಸರ್ಕಾರವು ಇ-ಗೆಜೆಟ್‌ನ್ನು ಪ್ರಾರಂಭಿಸುವ** ಅಗತ್ಯತೆಯನ್ನು ಮನಗಂಡಿದೆ. ಅದರಂತೆ, ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 134 ಕತವ 2019
## ಬೆಂಗಳೂರು, ದಿನಾಂಕ: 29.11.2019.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯದ ಸರ್ಕಾರವು ದಿನಾಂಕ 01.01.2020 ರಿಂದ ಜಾರಿಗೆ ಬರುವಂತೆ ರಾಜ್ಯ ಪತ್ರಗಳನ್ನು ಇ-ಗೆಜೆಟ್ ವ್ಯವಸ್ಥೆಯ ಮೂಲಕ ಪ್ರಕಟಿಸಲು ನಿರ್ಧರಿಸಲಾಗಿದೆ. ಅದರಂತೆ, url:- https://erajyapatra.karnataka.gov.in ನ ಜಾಲತಾಣದಲ್ಲಿ ಸರ್ಕಾರದ ರಾಜ್ಯ ಪತ್ರಗಳನ್ನು ಇನ್ನು ಮುಂದೆ ಪ್ರಕಟಿಸಲಾಗುವುದು. ಆದ್ದರಿಂದ ಈ ಕೆಳಗೆ ಕಾಣಿಸಿದ ಕ್ರಮಗಳನ್ನು ಅನುಸರಿಸಲು ಸೂಚಿಸಲಾಗಿದೆ.

1) ಇಲಾಖೆಯಲ್ಲಿ ಹೊರಡಿಸಲಾದ ಪ್ರಮುಖ ಆದೇಶ / ಅಧಿಸೂಚನೆ / ಸುತ್ತೋಲೆ / ಪ್ರಕಟಣೆ ಹಾಗೂ ಇತ್ಯಾದಿಗಳನ್ನು ಇ-ಗೆಜೆಟ್ ನಲ್ಲಿ ಪ್ರಕಟಿಸಲು ಪ್ರತಿಯೊಂದು ಇಲಾಖೆಯು Nodal Officer ಗಳನ್ನು ನೇಮಕ ಮಾಡುವುದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



2) ಇಲಾಖೆಯಿಂದ ನೇಮಕಗೊಂಡ Nodal Officer ಗಳಿಗೆ NIC ರವರ ಸಹಕಾರದೊಂದಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)ಯ ವತಿಯಿಂದ ತರಬೇತಿಯನ್ನು ನೀಡುವುದು.
3) ಇಲಾಖೆಯ ಸಂಬಂಧಪಟ್ಟ ಅಧೀನ ಕಾರ್ಯದರ್ಶಿಗಳು ಇ-ಗೆಜೆಟ್ ನಲ್ಲಿ ದಾಖಲೆಗಳನ್ನು ಪ್ರಕಟಿಸಲು ಡಿಜಿಟಿಲ್ ಸಹಿಯೊಂದಿಗೆ ಜಾಲತಾಣದ ಮುಖಾಂತರ ದಾಖಲೆಗಳನ್ನು ಸರ್ಕಾರಿ ಮುದ್ರಣಾಲಯಕ್ಕೆ ಕಳುಹಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.
4) ನಿರ್ದೇಶಕರು, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು ಇವರು ಇ-ಗೆಜೆಟ್ ಪ್ರಕಟಿಸುವ ಕುರಿತು ಕೇಂದ್ರ ಮುದ್ರಣಾಲಯದಲ್ಲಿ DOP-Admin / uploader / Approver ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಗುರುತಿಸುವುದು ಡಿಜಿಟಿಲ್ ಸಹಿಯೊಂದಿಗೆ ಅಂತಿಮವಾಗಿ ಇ-ಗೆಜೆಟ್ ಗೆ ದಾಖಲೆಗಳನ್ನು ಪ್ರಕಟಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮುದ್ರಣಾಲಯದ Nodal Officer ರವರು ಮೇಲ್ವಿಚಾರಣೆಯ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾರೆ.
5) ಪ್ರಸ್ತುತ ಬೆಂಗಳೂರು / ಮೈಸೂರು / ಧಾರವಾಡ ಮತ್ತು ಕಲಬುರ್ಗಿ ವಿಭಾಗೀಯ ಮುದ್ರಣಾಲಯದಲ್ಲಿ ಪ್ರತ್ಯೇಕವಾಗಿ ಪ್ರಕಟವಾಗುತ್ತಿರುವ ರಾಜ್ಯ ಪತ್ರವನ್ನು ನಿಲ್ಲಿಸುವುದು. ಎಲ್ಲಾ ಪ್ರಮುಖ ಆದೇಶ ಹಾಗೂ ಇತರ ದಾಖಲೆಗಳನ್ನು ಬೆಂಗಳೂರಿನ ಸರ್ಕಾರಿ ಮುದ್ರಣಾಲಯದಲ್ಲಿಯೇ ಇ-ಗೆಜೆಟ್ ನಲ್ಲಿ ಪ್ರಕಟಿಸುವುದು.
6) ಪ್ರಸ್ತುತ ಸರ್ಕಾರಿ ದಾಖಲೆಗಳನ್ನು www.gazette.kar.nic.in ಜಾಲತಾಣದಲ್ಲಿ ಪ್ರಕಟಿಸುವುದನ್ನು ದಿನಾಂಕ 31.12.2019 ರಿಂದ ನಿಲ್ಲಿಸುವುದು.
7) ಇ-ಗೆಜೆಟ್ ನಲ್ಲಿ ದಾಖಲೆಗಳು ಪ್ರಕಟಗೊಂಡ ನಂತರ ಭೌತಿಕವಾಗಿ ರಾಜ್ಯ ಪತ್ರವನ್ನು ಇಲಾಖೆಗಳಿಗೆ ಕಳುಹಿಸುವುದನ್ನು ನಿಲ್ಲಿಸುವುದು.
8) ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು ಇವರು ಇ-ಗೆಜೆಟ್‌ನ್ನು ಪ್ರಕಟಿಸುವ ಜಾಲತಾಣಕ್ಕೆ ತಾಂತ್ರಿಕ ನಿರ್ದೇಶಕರು, NIC, ಪೋಡಿಯಂ ಬ್ಲಾಕ್, ಬೆಂಗಳೂರು ಇವರು ಸಲಹೆ-ಸಹಕಾರಗಳನ್ನು ನೀಡುವ ಎಲ್ಲಾ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಕೆ. ರವೀಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ತಪಾಸಣೆ).

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೯.

HARSHITH B Y
Digitally signed by HARSHITH B Y
Date: 2020.01.01 09:59:20 +05'30'